ದಿನಾಂಕ 9 ನೇ ನವೆಂಬರ್ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಆರೋಪಿ ಪರ ವಕೀಲರಿಂದಃ-

ಇಟ್ಟೀರಾ ಸಭಿತಾ ನಮ್ಮ ಊರಿನವರು. ಸಭಿತಾರವರ ಪತಿ 2019 ಅಥವಾ 2018 ರಲ್ಲಿ ಮೃತರಾದರು. ಸಭಿತಾ ಮತ್ತು ಪೊನ್ನಪ್ಪ ನವರು ಆರೋಪಿ ಜೊತೆ ವ್ಯವಹಾರ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣ ದಾಖಲಿಸಿದ ನಂತರ ಸದರಿ ವ್ಯವಹಾರದ ಬಗ್ಗೆ ತಿಳಿಯಿತು. ನಾನು ಆರೋಪಿ ವಿರುದ್ಧ 2 ಚೆಕ್ ಪ್ರಕರಣ ದಾಖಲಿಸಿದ್ದೇನೆ. ಆರೋಪಿ ಮತ್ತು ಅವರ ಪತಿ ನಮ್ಮ ಮನೆಯ ಗಾರೆ ಕೆಲಸ ಮಾಡುತ್ತಿದ್ದರು ಹಾಗಾಗಿ ಪರಿಚಯ. ನಾನು ಬೇರೆಯವರಿಗೆ ಗಾರೆ ಕೆಲಸ ವಹಿಸಿದ್ದೆ ಅವರ ಜೊತೆ ಆರೋಪಿ ಹಾಗೂ ಅವರ ಪತಿ ಬರುತ್ತಿದ್ದರು. ರಿಪೇರಿ ಇದ್ದಾಗ ಬಂದು ಕೆಲಸ ಮಾಡುತ್ತಿದ್ದರು. ಹಾಗಾಗಿ ಬಂದು ಕೆಲಸ ಮಾಡಿ ಹೋಗುತ್ತಿದ್ದರು. ನಮ್ಮ ಮನೆಕೆಲಸವನ್ನು 2015 ರಿಂದ 2016 ತನಕ ಮಾಡುತ್ತಿದ್ದರು.

ಆಸಮಯದಲ್ಲಿ ದಿನಗೂಲಿ ಎಷ್ಟು ಹಣ ಇತ್ತು ಅಷ್ಟು ಹಣ ಆರೋಪಿ ಮತ್ತು ಅವರ ಪತಿಗೆ ನೀಡುತ್ತಿದ್ದೆನು. ಅದನ್ನು ಹೊರತುಪಡಿಸಿ ಬೇರೆ ಹಣ ಕೇಳಿ ಪಡೆಯುತ್ತಿದ್ದರು. ಮಿಷನರಿ ಕೆಲಸಕ್ಕೆ 5 ರಿಂದ 6 ಅಥವಾ ಹೆಚ್ಚು ಜನ ಕೆಲಸಕ್ಕೆ ಬರುತ್ತಿದ್ದರು ನಿಖರವಾಗಿ ಹೇಳಲಾಗುವುದಿಲ್ಲ. ಇಟ್ಟೀರಾ ಸಭಿತಾ ಅವರ ಪತಿ ತೀರಿಕೊಂಡ ನಂತರ ಪೊನ್ನಪ್ಪ ರವರು ನೀಡಿದ ಚೆಕ್ ಗಳನ್ನು ಪಡೆದು ಇಟ್ಟೀರಾ ಸಭಿತಾ ರವರ ಆರೋಪಿ ವಿರುದ್ಧ ಚೆಕ್ ಪ್ರಕರಣ ದಾಖಲಿಸಿದ್ದಾರ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಯಾವತ್ತೂ ನಮ್ಮ ಮನೆಯಲ್ಲಿ ಕೆಲಸಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿ ನಡುವೆ ಯಾವುದೇ ಹಣದ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಹಣ ನೀಡುತ್ತಿದ್ದ ಬಗ್ಗೆ ನಾನು ಡೈರಿಯಲ್ಲಿ ಬರೆದಿರುವುದಿಲ್ಲ.

ನಾನು 2020 ರಲ್ಲಿ ಆರೋಪಿಗೆ 5 ಲಕ್ಷ ಹಣವನ್ನು ಬೇರೆ ಬೇರೆ

ದಿನಾಂಕ ಹಾಗೂ ತಿಂಗಳುಗಳಲ್ಲಿ ನೀಡಿದ್ದೇನೆ. ದಿ. 16.09.2020 ರಲ್ಲಿ 1 ವರೆ ಲಕ್ಷ ಹಣ ನೀಡಿದ್ದೇನೆ. ಅಕ್ಟೋಬರ್ 2020 (ಅದಾಂಜ 20 ನೇ ತಾರೀಖು) ರಲ್ಲಿ ಪುನಃ ಆರೋಪಿ 1 ಲಕ್ಷ ಹಣ ಕೇಳಿ ಪಡೆದರು. ಲೋನ್ ಪಡೆದು ತೀರಿಸುತ್ತೇನೆ ಎಂದು ಹೇಳಿದರು. ನವೆಂಬರ್ 2020 ರಲ್ಲಿ 1 ಲಕ್ಷ ಹಣ ನೀಡಿದ್ದೇನೆ. ಡಿಸೆಂಬರ್ 2020 ರಲ್ಲಿ 2 ಲಕ್ಷ ಹಣ ನೀಡಿದ್ದೇನೆ. ಆರೋಪಿ ಭದ್ರತೆಗಾಗಿ ಡಿಸೆಂಬರ್ 2020 ರಲ್ಲಿ ಒಂದು ಚೆಕ್ ನ್ನು ನೀಡಿದರು. ಜನವರಿಯಲ್ಲಿ ಹಾಜರುಪಡಿಸಿ ಎಂದು ತಿಳಿಸಿದರು. ಫೆಬ್ರುವರಿ 2 ನೇ ವಾರದಲ್ಲಿ ಚೆಕ್ ನ್ನು ಬ್ಯಾಂಕ್ ಗೆ ಹಾಜರುಪಡಿಸಿರುತ್ತೇನೆ. ದಿನಾಂಕ ನಿಖರವಾಗಿ ನೆನಪಿಲ್ಲ. ನಾನು ಹಣವನ್ನು ಆರೋಪಿಗೆ ನಗದಾಗಿ ನೀಡಿದ್ದೇನೆ. 20 ಸಾವಿರ ಮೇಲ್ಪಟ್ಟು ಹಣವನ್ನು ಬ್ಯಾಂಕ್ ಮೂಲಕ ನೀಡಬೇಕೆಂಬ ನಿಯಮ ಇದೆ ಎಂದರೆ ಸರಿ . ಆರೋಪಿ ನಗದಾಗಿ ಹಣ ಬೇಕು ಎಂದು ಕೇಳಿದ ಕಾರಣ ನಗದಾಗಿ ನೀಡಿದ್ದೇನೆ. ನಾನು ಕೆನರಾ ಬ್ಯಾಂಕ್, ವಿಜಯ ಬ್ಯಾಂಕ್ , SBI ಹಾಗೂ ನನ್ನ ಇತರೆ ಬ್ಯಾಂಕ್ ಗಳಿಂದ ಹಣ ತಂದು ಹಾಗೂ ನನ್ನ ಬಳಿ ಇದ್ದ ನಗದು ಹಣವನ್ನು ಆರೋಪಿಗೆ ನೀಡಿದ್ದೇನೆ. ಯಾವ ದಿನಾಂಕದಂದು ಎಷ್ಟು ಹಣವನ್ನು ತಂದೆ ಎಂದು ಹೇಳಲಾಗುವುದಿಲ್ಲ. ನಾನು ಚೆಕ್ ನ್ನು ಹೊರತುಪಡಿಸಿ ಬೇರೆ ಕರಾರನ್ನು ಮಾಡಿಕೊಂಡಿಲ್ಲ. ಆರೋಪಿಗೆ ಹಣ ನೀಡಿದ ಬಗ್ಗೆ ನನ್ನ ಡೈರಿಯಲ್ಲಿ ಬರೆದಿಟ್ಟಿದ್ದೇನೆ. ಹಾಗೂ ಯಾರಿಗೆ ಹಣ ನೀಡಿದರೂ ಡೈರಿಯಲ್ಲಿ ನಮೂದಿಸಿರುತ್ತೇನೆ. ಆರೋಪಿಯ ಸಹಿಯನ್ನು ಡೈರಿಯಲ್ಲಿ ಪಡೆದಿರುವುದಿಲ್ಲ. ನಾನು ಸೆಪ್ಟೆಂಬರ್ ನಿಂದ ನವೆಂಬರ್ 2020 ಕೋವಿಡ್ ಸಮಯ ಎಂದರೆ ಸರಿ ಆರೋಪಿ ತನಗೆ ವ್ಯಾಪಾರ ನಷ್ಟವಾಗಿದೆ ಹಣ ಬೇಕು ಎಂದು ಕೇಳಿದರು.

ಜನವರಿಯಲ್ಲಿ ಹಣ ವಾಪಸ್ ಮಾಡುತ್ತೇನೆ ಎಂದು ಆರೋಪಿ ಹೇಳಿದರು. ಆರೋಪಿ ತನ್ನ ವ್ಯವಹಾರಕ್ಕೆ ಸಂಬಂಧಿಸಿದಂತೆ ಬೇರೆಯವರು ಹಣ ಕೊಡಲು ಬಾಕಿ ಇದೆ ಅವರು ನೀಡಿದರೆ ವಾಪಸ್ ನೀಡುತ್ತೇನೆ ಎಂದು ತಿಳಿಸಿದರು. ನಾನು ಎಷ್ಟು ಮುಖ ಬೆಲೆಯ ನೋಟು ಇರುವ ಹಣವನ್ನು ನೀಡಿದೆ ಎಂದು ಈಗ ನೆನಪಿಲ್ಲ. ನಾನು ಡಿಸೆಂಬರ ನಲ್ಲಿ ಆರೋಪಿಗೆ ಹಣವನ್ನು ನೀಡಿದಾಗ ಆರೋಪಿ ಜೊತೆ ಒಬ್ಬ ಮಹಿಳೆ ಬಂದಿದ್ದರು. ಆರೋಪಿ ನನಗೆ ಒಂದೇ ಚೆಕ್ ನೀಡಿದ್ದರು. ಆರೋಪಿ ಪೊನ್ನಂಪೇಟೆಯಲ್ಲಿ ವಾಸವಿದ್ದಾರೆ ಅವರ ಮನೆಯನ್ನು

ಹಾಗೂ ನಿವೇಶನವನ್ನು ಒಂದು ಬಾರಿ ತೋರಿಸಿದ್ದರು. ನಾನು ಹಣ ನೀಡಿದ ವಿಚಾರ ನನ್ನ ಪತ್ನಿಗೆ ಹಾಗೂ ಮಕ್ಕಳಿಗೆ ತಿಳಿದಿದೆ ಅವರು ಸಹ ಹಣ ನೀಡುವಾಗ ಹಾಜರಿದ್ದರು.

ಸಭಿತಾರವರಿಗೆ ಹಲವಾರು ಸಂಘ ಸಂಸ್ಥೆಗಳಲ್ಲಿ ಸಾಲ ಇದೆ ಎಂದರೆ ನನಗೆ ಗೊತ್ತಿಲ್ಲ. ಸಂಘಗಳಲ್ಲಿ ಆರೋಪಿ ಸಾಲ ಪಡೆಯುವಾಗ ನೀಡಿದ್ದ ಚೆಕ್ ನ್ನು ಸಭಿತಾ ರವರು ತಂದು ನನಗೆ ನೀಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ವಕೀಲರು ಎಷ್ಟು ನೋಟೀಸ್ ನೀಡಿದ್ದಾರೆ ನನಗೆ ಗೊತ್ತಿಲ್ಲ ಒಂದು ನೋಟೀಸ್ ನೀಡಿರಬಹುದು. ನಿ ಪಿ 1 ನ್ನು ಆರೋಪಿ ನನ್ನ ಎದುರುಗಡೆ ಬರೆದರು. ಚೆಕ್ ನಲ್ಲಿ ಇರುವ ಬರವಣಿಗೆ ಹಾಗೂ ಸಹಿ ಬೇರೆ ಬೇರೆ ಶಾಹಿಯಲ್ಲಿದೆ ಎಂದರೆ ಸರಿಯಲ್ಲ. ಯಾವುದೇ ವ್ಯತ್ಯಾಸ ಇಲ್ಲ ಒಂದೇ ರೀತಿ ಬರವಣಿಗೆ ಇದೆ ಎನ್ನುತ್ತಾರೆ. ಶಿವಮ್ಮನವರ ಜೊತೆಯಲ್ಲಿದ್ದವರೂ ಚೆಕ್ ಬರೆದರು ಶಿವಮ್ಮ ಸಹಿ ಮಾಡಿದರು. ಚೆಕ್ ನ್ನು ಕೈ ಬರಹ ತಜ್ಞರಿಗೆ ಕಳುಹಿಸುವುದು ನಿಮಗೆ ಬಿಟ್ಟಿರುವುದು ಎನ್ನುತ್ತಾರೆ.

ಆರೋಪಿ ಚೆಕ್ ನೀಡಿದ ನಂತರ ನಾನು ಅದನ್ನು ಹಾಜರುಪಡಿಸುವ ಮೊದಲು ಬಂದು 40 ಅಥವಾ 41 ಸಾವಿರ ಹಣ ಬಡ್ಡಿ ನೀಡಲು ಅಗತ್ಯ ಎಂದು ಕೇಳಿ ಪಡೆದರು. ಆದರೆ ದಿನಾಂಕ ನೆನಪಿಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಹಾಗೂ ಸಭಿತಾ ರವರು ಸೇರಿ ನಮಗೆ ಬೇಕಾದಷ್ಟು ಹಣ ಬರೆದುಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಯಾವತ್ತೂ ಹಣವನ್ನು ಬ್ಯಾಂಕ್ ನಿಂದ ತಂದು ನೀಡಿಲ್ಲ ಎಂದರೆ ಸರಿಯಲ್ಲ.

ಆರೋಪಿ ಮರು ಉತ್ತರ ನೀಡಿದ್ದಾರೆ. ನನಗೆ ಯಾವ ಬ್ಯಾಂಕ್ ನಲ್ಲಿ ಸಾಲ ಇದೆ ಎಂದು ಪಹಣಿ ನೋಡಿ ಹೇಳುತ್ತೇನೆ. ಕೆನರಾ ಬ್ಯಾಂಕ್ ನಲ್ಲಿ 10 ಲಕ್ಷ ಸಾಲ ಪಡೆದಿದ್ದೇನೆ. ಜಿ.ಆರ್.ಸಿ ಬ್ಯಾಂಕ್ ನಲ್ಲಿ 3 ಲಕ್ಷ ಸಾಲ ಪಡೆದಿದ್ದೇನೆ. ಪಿ.ಎಲ್. ಡಿ ಬ್ಯಾಂಕ್ ನಲ್ಲಿ 3 ಲಕ್ಷ ಸಾಲ ಪಡೆದಿದ್ದೇನೆ. ಸದರಿ ಸಾಲಗನಳ್ನು ನಾನು ಪಾವತಿಸುತ್ತಿದ್ದೇನೆ ಇನ್ನು

ಬಾಕಿ ಇದೆ ಎನ್ನುತ್ತಾರೆ. ನನಗೆ ಸಾಲ ಇರುವ ಕಾರಣ ಆರೋಪಿಗೆ ಸಾಲ ನೀಡುವ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಪರಿಚಯ ಇಲ್ಲ ಎಂದರೆ ಸರಿಯಲ್ಲ. ಸಭಿತಾ ರವರು ಹೇಳಿದ ಕಾರಣ ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

(ಸಾಕ್ಷಿಯವರ ಸಹಿ)

sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.